# <u>ಮಂಗಳೂರು ವಿಶ್ವವಿದ್ಯಾನಿಲಯ</u>

**ದಿನಾಂಕ 31.07.2025ರಂದು ಪೂರ್ವಾಹ್ನ ಗಂಟೆ 10.30ಕ್ಕೆ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟು ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2025ನೇ ಸಾಲಿನ ಐದನೇ ಸಾಮಾನ್ಯ ಸಭೆಯ ನಡವಳಿಗಳು.**

**ಉಪಸ್ಥಿತರು :**

| | | |
|---|---|---|
| 1. | ಪ್ರೊ. ಪಿ.ಎಲ್. ಧರ್ಮ<br>ಕುಲಪತಿಗಳು | ಅಧ್ಯಕ್ಷರು |
| 2. | ಡಾ. ಕವಿತಾ ಕೆ.ಆರ್.<br>ಜಂಟಿ ನಿರ್ದೇಶಕರು (ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ) | ಸದಸ್ಯರು |
| 3. | ಶ್ರೀ ಹರೀಶ ಶೆಟ್ಟಿ,<br>ಪ್ರಾಂಶುಪಾಲರು, ಕರ್ನಾಟಕ ಸರ್ಕಾರಿ ಪಾಲಿಟೆಕ್ನಿಕ್,<br>ಮಂಗಳೂರು. (ತಾಂತ್ರಿಕ ಶಿಕ್ಷಣ ನಿರ್ದೇಶಕರ ಪರವಾಗಿ) | ಸದಸ್ಯರು |
| 4. | ಪ್ರೊ. ಪರಿಣಿತ<br>ಡೀನರು, ಕಲಾ ನಿಕಾಯ | ಸದಸ್ಯರು |
| 5. | ಡಾ. ಎಸ್.ಬಿ.ಎಂ. ಪ್ರಸನ್ನ | ಸದಸ್ಯರು |
| 6. | ಡಾ. ಕೆ.ಸಿ. ಮಹದೇಶ | ಸದಸ್ಯರು |
| 7. | ಶ್ರೀ ಸುರೇಶ್ ಕುಮಾರ್ ಬಿ. ನಾವೂರು | ಸದಸ್ಯರು |
| 8. | ಶ್ರೀ ಸಿ.ಎ. ನಿತಿನ್ ಜೆ. ಶೆಟ್ಟಿ | ಸದಸ್ಯರು |
| 9. | ಶ್ರೀಮತಿ ಜೂಡಿತ್ ಮೆಂಡೋನ್ಸ | ಸದಸ್ಯರು |
| 10. | ಶ್ರೀ ರಘುರಾಜ್ | ಸದಸ್ಯರು |
| 11. | ಶ್ರೀ ಅಚ್ಯುತ ಗಟ್ಟಿ | ಸದಸ್ಯರು |
| 12. | ಪ್ರೊ. ಹೆಚ್. ದೇವೇಂದ್ರಪ್ಪ<br>ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |

13. ಪ್ರೊ. ಸಂಗಪ್ಪ ವೈ. — ವಿಶೇಷ ಆಹ್ವಾನಿತರು
ಹಣಕಾಸು ಅಧಿಕಾರಿ (ಪ್ರಭಾರ)

14. ಶ್ರೀ ಕೆ. ರಾಜು ಮೊಗವೀರ, **ಕೆ.ಎ.ಎಸ್.** — ಸದಸ್ಯ ಕಾರ್ಯದರ್ಶಿ
ಕುಲಸಚಿವರು (ಆಡಳಿತ)

**ಅನುಪಸ್ಥಿತರು:**

1. ಶ್ರೀ ಮಹಮ್ಮದ್ ಸವಾದ್ — ಸದಸ್ಯರು

2. ಶ್ರೀಮತಿ ಪುಷ್ಪಲತಾ ಹೆಚ್.ಕೆ. — ಸದಸ್ಯರು
ಪ್ರಾಂಶುಪಾಲರು ಮತ್ತು ಸಹ ನಿರ್ದೇಶಕರು,
ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ,
(**ಶಾಲಾ ಶಿಕ್ಷಣ ಮತ್ತು ಸಾಕ್ಷರತೆ** ಆಯುಕ್ತರ ಪರವಾಗಿ)

3. ಡಾ. ಸಂದೇಶ್ ಕೆ.ಎಸ್. — ಸದಸ್ಯರು
(ವೈದ್ಯಕೀಯ ಶಿಕ್ಷಣ ನಿರ್ದೇಶಕರ ಪರವಾಗಿ)

<u>**ಪ್ರಾರಂಭಿಕ**</u>

**ಪ್ರಾರಂಭದಲ್ಲಿ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಯವರನ್ನು ಹಾಗೂ ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.**

**ಮಾನ್ಯ ಕುಲಪತಿಯವರು ಮತ್ತೊಮ್ಮೆ ಎಲ್ಲರನ್ನು ಸ್ವಾಗತಿಸಿ, ಸಭೆಯನ್ನು ಪ್ರಾರಂಭಿಸಿದರು.**

- **ಸ್ವಾಗತ:**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 28(1)ಸಿ ರಂತೆ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿರುವ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯಲ್ಲಿ ಭಾಗವಹಿಸಲು ನಿಯೋಜಿಸಲಾಗಿರುವ ಕರ್ನಾಟಕ ಸರ್ಕಾರಿ ಪಾಲಿಟೆಕ್ನಿಕ್, ಕದ್ರಿ ಹಿಲ್ಸ್, ಮಂಗಳೂರು ಇದರ ಪ್ರಾಂಶುಪಾಲರಾದ **ಶ್ರೀ ಹರೀಶ ಶೆಟ್ಟಿ** ಇವರನ್ನು ಸಿಂಡಿಕೇಟ್ ಸಭೆಗೆ ಸ್ವಾಗತಿಸಲಾಯಿತು.

- **ಕೃತಜ್ಞತೆ:**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಅಧಿನಿಯಮ 2000ದ ಪ್ರಕರಣ 28(1)(ಎಫ್)ರ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿಗೆ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರ ಜೇಷ್ಠತೆ ಹಾಗೂ ಸರದಿಯ ಮೇರೆಗೆ ಸದಸ್ಯರಾಗಿ ನಾಮನಿರ್ದೇಶನಗೊಂಡಿದ್ದ **ಡಾ. ಶಂಕರಮೂರ್ತಿ ಹೆಚ್.ಕೆ.,** ಪ್ರಾಂಶುಪಾಲರು, ಆಳ್ವಾಸ್ ಕಾಲೇಜ್ ಆಫ್ ಎಜ್ಯುಕೇಶನ್, ಮೂಡಬಿದಿರೆ ಇವರ ಸದಸ್ಯತ್ವದ ಅವಧಿಯು ಕೊನೆಗೊಂಡಿರುವುದರಿಂದ ಸಿಂಡಿಕೇಟ್ ಸದಸ್ಯತ್ವದಿಂದ ಮುಕ್ತಗೊಳಿಸಲಾಗಿದೆ.

ಇವರು ಮಂಗಳೂರು ವಿಶ್ವವಿದ್ಯಾನಿಲಯದ ಸರ್ವತೋಮುಖ ಪ್ರಗತಿಗೆ ಹಾಗೂ ಉನ್ನತ ಶಿಕ್ಷಣದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ಸಲಹೆ ಮತ್ತು ಸಹಕಾರಗಳನ್ನು ನೀಡಿರುವುದರಿಂದ ಸದರಿಯವರಿಗೆ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಪರವಾಗಿ ಕೃತಜ್ಞತಾಪೂರ್ವಕ ವಂದನೆಗಳನ್ನು ಸಲ್ಲಿಸಲಾಯಿತು.

# ಪ್ರಾಸ್ತಾವಿಕ

**ಈ ಕೆಳಗಿನ ವಿಷಯಗಳನ್ನು ಸಭೆಯ ಗಮನಕ್ಕೆ ತರಲಾಯಿತು.**

1) ಪದವಿ ಪರೀಕ್ಷೆಗಳ ಫಲಿತಾಂಶವನ್ನು ಪ್ರಕಟಿಸಲಾಗಿದ್ದು, ಸ್ನಾತಕೋತ್ತರ ಕೋರ್ಸುಗಳ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗಿದೆ. ಪರೀಕ್ಷಾ ಫಲಿತಾಂಶಗಳನ್ನು ಕ್ಲಪ್ತ ಸಮಯದಲ್ಲಿ ಪ್ರಕಟಿಸಲು ಶ್ರಮ ವಹಿಸಿದ ಕುಲಸಚಿವ (ಪರೀಕ್ಷಾಂಗ), ಪರೀಕ್ಷಾ ಕಾರ್ಯದಲ್ಲಿ ತೊಡಗಿದ್ದ ಶಿಕ್ಷಕರು ಹಾಗೂ ಶಿಕ್ಷಕೇತರ ಸಿಬ್ಬಂದಿಗಳ ಸೇವೆಯನ್ನು ಶ್ಲಾಘಿಸಲಾಯಿತು.

2) ಕೊಡಗು ವಿಶ್ವವಿದ್ಯಾನಿಲಯ ಪ್ರಾರಂಭದ ಪೂರ್ವದಲ್ಲಿ, ಮಂಗಳೂರು ವಿಶ್ವವಿದ್ಯಾನಿಲಯದ 2022-23ನೇ ಸಾಲಿನ ಶೈಕ್ಷಣಿಕ ವರ್ಷದ ಪ್ರಥಮ ಪದವಿ ತರಗತಿಗೆ ಪ್ರವೇಶಾತಿ ಪಡೆದಿದ್ದ ವಿದ್ಯಾರ್ಥಿಗಳ ತೃತೀಯ ವರ್ಷದ ಪದವಿ ಪರೀಕ್ಷೆಗಳನ್ನು ಮುಗಿಸಿ, ಫಲಿತಾಂಶವನ್ನು ಪ್ರಕಟಿಸಲಾಗಿದೆ. ತದನಂತರ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳು ಕೊಡಗು ವಿಶ್ವವಿದ್ಯಾನಿಲಯದ ಶೈಕ್ಷಣಿಕ ವ್ಯವಸ್ಥೆಗೆ ಒಳಪಟ್ಟಿರುತ್ತಾರೆ. ಕೊಡಗು ವಿಶ್ವವಿದ್ಯಾನಿಲಯದ ಕುಲಪತಿಯವರೊಂದಿಗೆ ಆನ್‌ಲೈನ್ ಮೂಲಕ ಸಭೆ ನಡೆಸಿ ಶೈಕ್ಷಣಿಕ ಮತ್ತು ಆಡಳಿತಾತ್ಮಕ ವಿಷಯಗಳ ಬಗ್ಗೆ ಚರ್ಚಿಸಲಾಗಿ, ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಪಟ್ಟಂತೆ ಸರ್ಕಾರದ ಸೂಚನೆಯಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದಾಗಿ ಸಭೆಗೆ ತಿಳಿಸಲಾಯಿತು.

3) ಆರ್ಥಿಕ ಮಿತವ್ಯಯ ಕಾಪಾಡುವ ಹಿನ್ನೆಲೆಯಲ್ಲಿ ತಂತ್ರಜ್ಞಾನ ಬಳಸಿಕೊಂಡು ಡಿಜಿಟಲ್ ಮೌಲ್ಯಮಾಪನ ಕಾರ್ಯವನ್ನು ಕೈಗೊಳ್ಳುವ ಬಗ್ಗೆ ಸರ್ಕಾರವು ಸೂಚನೆಯನ್ನು ನೀಡಿದ್ದು ಇದನ್ನು UUCMS ಮೂಲಕ ಅಳವಡಿಸುವ ಬಗ್ಗೆ ಚರ್ಚೆ ನಡೆಯುತ್ತಿರುವುದಾಗಿ ಸಭೆಯ ಗಮನಕ್ಕೆ ತರಲಾಯಿತು. ಈ ಬಗ್ಗೆ ಎಂಟು ಸಂಸ್ಥೆಗಳು Technical Support, Digital Platform, Digital Valuation ಬಗ್ಗೆ ಆಸಕ್ತಿ ವಹಿಸಿ ಪ್ರಸ್ತಾವನೆಯನ್ನು ಸಲ್ಲಿಸಿರುವುದಾಗಿ ಸಭೆಗೆ ತಿಳಿಸಲಾಯಿತು.

4) Edu Easy Project ಅನ್ವಯ ಕೇಂದ್ರ ಸರ್ಕಾರದ ಅನುದಾನವನ್ನು ಬಳಸಿಕೊಂಡು ವಿದ್ಯಾರ್ಥಿಗಳಿಗೆ ಯಾವುದೇ ಆರ್ಥಿಕ ಹೊರೆಯಿಲ್ಲದೆ ವಿಶ್ವವಿದ್ಯಾನಿಲಯ ಹಾಗೂ ಸಂಯೋಜಿತ ಕಾಲೇಜುಗಳ ವಿದ್ಯಾರ್ಥಿಗಳ ಕೌಶಲ್ಯಾಭಿವೃದ್ಧಿ ತರಬೇತಿ ನೀಡಲು ಕೆಲವು ಸಂಸ್ಥೆಗಳು ಮುಂದೆ ಬಂದಿದ್ದು ಇದನ್ನು UUCMS ಮೂಲಕವೇ ವಿಲೀನಗೊಳಿಸುವ ಬಗ್ಗೆ ಚರ್ಚೆ ನಡೆಸಲಾಗುತ್ತಿದೆ ಎಂದು ಸಭೆಗೆ ತಿಳಿಸಲಾಯಿತು.

5) ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿ ಸಭೆಯಲ್ಲಿ ಮಾನ್ಯ ಕುಲಪತಿಯವರು ಹಾಗೂ ಕುಲಸಚಿವರು ಭಾಗವಹಿಸಿ ವಿಶ್ವವಿದ್ಯಾನಿಲಯದಲ್ಲಿ ಈ ಹಿಂದೆ ನಡೆದಿದೆ ಎನ್ನಲಾದ ಹಗರಣದ ಬಗ್ಗೆ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ನಡೆದ ತನಿಖಾ ವರದಿಯ ಕುರಿತು ಭರವಸೆಗಳ ಸಮಿತಿಯು ಚರ್ಚೆ ನಡೆಸಿ ಈ ಬಗ್ಗೆ ಹೇಳಿಕೆಗಳನ್ನು ಸಮಿತಿಯು ದಾಖಲು ಮಾಡಿಕೊಂಡಿರುತ್ತದೆ. ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರು ಆಗಸ್ಟ್ 15 ರ ನಂತರದ ದಿನಗಳಲ್ಲಿ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿ ಸಮಗ್ರ ಮಾಹಿತಿಯನ್ನು ಪಡೆಯಲಿರುವುದಾಗಿ ಸಭೆಗೆ ತಿಳಿಸಲಾಯಿತು.

6) ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿಯವರು ಆನ್‌ಲೈನ್ ಮೂಲಕ ಸಭೆ ನಡೆಸಿ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಪ್ರಗತಿ ಪರಿಶೀಲನೆ ನಡೆಸಿರುವ ಬಗ್ಗೆ ಸಭೆಗೆ ತಿಳಿಸಲಾಯಿತು.

## I. ಅನುಸರಣಾ ವರದಿಯ ಅನುಮೋದನೆ

**1) ದಿನಾಂಕ 09.05.2025ರಂದು ನಡೆದ ಸಿಂಡಿಕೇಟಿನ 2025ನೇ ಸಾಲಿನ ತೃತೀಯ ಸಾಮಾನ್ಯ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ.**

**- ಅನುಮೋದಿಸಲಾಯಿತು –**

**2) ದಿನಾಂಕ 04.06.2025ರಂದು ನಡೆದ ಸಿಂಡಿಕೇಟಿನ 2025ನೇ ಸಾಲಿನ ಚತುರ್ಥ ಸಾಮಾನ್ಯ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ.**

**- ಅನುಮೋದಿಸಲಾಯಿತು –**

## II. ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.5:1 (2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಜಮೀನಿನಲ್ಲಿ ತಾಲೂಕು ಮಟ್ಟದ ಕಚೇರಿಗಳ ನಿರ್ಮಾಣಕ್ಕೆ ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ ಇವರು ಸಲ್ಲಿಸಿರುವ ಪ್ರಸ್ತಾವನೆಯ ಬಗ್ಗೆ.

**ನಿರ್ಣಯ:** ಸರ್ಕಾರಕ್ಕೆ ಸಲ್ಲಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.5:2(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಸರ್ವೇ ನಂಬ್ರ 113 ರಲ್ಲಿ 2.50 ಎಕರೆ ಜಮೀನನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ಮಂಜೂರು ಮಾಡುವ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಸರ್ಕಾರಕ್ಕೆ ಸಲ್ಲಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.5:3(2025)

ವಿಷಯ: ಟೆಂಡರ್ ಸಮಿತಿ ಹಾಗೂ ಟೆಂಡರ್ ಪರಿಶೀಲನಾ ಸಮಿತಿಯ ಕಾರ್ಯ ವ್ಯಾಪ್ತಿಯಲ್ಲಿ ಎಲ್-1 ಮತ್ತು ಎಲ್-2 ಪರಿಗಣಿಸುವ ನಿಟ್ಟಿನಲ್ಲಿ ಕೆ.ಟಿ.ಪಿ.ಪಿ ACT ಪ್ರಕಾರ ಕ್ರಮ ಕೈಗೊಳ್ಳುವ ಬಗ್ಗೆ.

**ನಿರ್ಣಯ:** ಕೆ.ಟಿ.ಪಿ.ಪಿ ACT ಪ್ರಕಾರ ಕ್ರಮವಹಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.5:4(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ, ವಿವಿಧ ವಿಭಾಗ/ಕೋರ್ಸು ಮತ್ತು ಕಚೇರಿಗಳಿಗೆ ಇಂಟರ್‌ನೆಟ್ ಸಂಪರ್ಕ ಕಲ್ಪಿಸಲು ಬೇಕಾಗಿರುವ UTP/OFC Networking ಐಟಂಗಳನ್ನು ಧಾರಣಾ ಗುತ್ತಿಗೆ ದರದಲ್ಲಿ ಖರೀದಿಸುವ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಇಂಟರ್‌ನೆಟ್ ಸಂಪರ್ಕ ಕಲ್ಪಿಸುವ ಸಂಸ್ಥೆಯೇ ನಿರ್ವಹಣೆ (Maintainance) ಗೆ ಅಗತ್ಯವಿರುವ ನೆಟ್‌ವರ್ಕಿಂಗ್ ಐಟಂಗಳನ್ನು ಒದಗಿಸುವ ಬಗ್ಗೆ ಒಪ್ಪಂದದಲ್ಲಿ ಸೇರಿದೆಯೇ ಎಂದು ಪರಿಶೀಲಿಸಿ ವಿವರಗಳನ್ನು ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಾರ್ವತ್ರಿಕ:ಸಾ.ಸ.5:5(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ 2023-24ನೇ ಸಾಲಿನ ವಾರ್ಷಿಕ ವರದಿಯ ಅನುಮೋದನೆ ಬಗ್ಗೆ.

**ನಿರ್ಣಯ:** ವಾರ್ಷಿಕ ವರದಿಯ ಸಾರಂಶವನ್ನು ಸಭೆಯಲ್ಲಿ ಮಂಡಿಸುವಂತೆ ಮಾನ್ಯ ಸಿಂಡಿಕೇಟು ಸದಸ್ಯರಾದ ಡಾ. ಕೆ.ಸಿ. ಮಹದೇಶ ಹಾಗೂ ಡಾ. ಎಸ್. ಬಿ.ಎಂ. ಪ್ರಸನ್ನ ಕೋರಿದರು. ವಾರ್ಷಿಕ ವರದಿಯಲ್ಲಿ ಸಿಂಡಿಕೇಟು ಸದಸ್ಯರ ಹೆಸರುಗಳನ್ನು ಸೇರ್ಪಡೆಗೊಳಿಸಲು ಮಾನ್ಯ ಸಿಂಡಿಕೇಟು ಸದಸ್ಯರಾದ ಶ್ರೀ ಸುರೇಶ್ ಕುಮಾರ್ ಬಿ. ನಾವೂರು ಹಾಗೂ ಇತರ ಸದಸ್ಯರುಗಳು ಸಲಹೆ ನೀಡಿದರು. ಮುಂದಿನ ವಾರ್ಷಿಕ ವರದಿಯಲ್ಲಿ ಸಿಂಡಿಕೇಟು ಸದಸ್ಯರುಗಳ ಹೆಸರುಗಳನ್ನು ಮುದ್ರಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ:ಸಾ.ಸ.5:6(2025)

ವಿಷಯ: ಡಾ.ವಿಪಿಎಸ್ ನಾಯ್ಡು, Chief Scientist & Professor (AcSIR), CSIR-National Aerospace Laboratories, Bangalore ಇವರಿಗೆ ಡಿ.ಎಸ್ಸಿ. (Doctor of Sciences) ಪದವಿ ಪ್ರದಾನ ಮಾಡುವ ಬಗ್ಗೆ.

**ನಿರ್ಣಯ:** ಈ ಬಗ್ಗೆ ಹೆಚ್ಚಿನ ಚರ್ಚೆಯ ಅಗತ್ಯವಿರುವುದರಿಂದ ಕಾರ್ಯಸೂಚಿಯನ್ನು ಮುಂದೂಡಲು ನಿರ್ಣಯಿಸಲಾಯಿತು.

ಮಾನ್ಯ ಸಿಂಡಿಕೇಟು ಸದಸ್ಯರಾದ ಡಾ.ಕೆ.ಸಿ. ಮಹದೇಶ ಇವರ ಸಲಹೆ ಮೇರೆಗೆ ಡಿ.ಎಸ್ಸಿ. / ಡಿ.ಲಿಟ್. ಪದವಿ ಪ್ರದಾನ ಮಾಡಲು ಪರಿಗಣಿಸುವ ಅಂಶಗಳ ಬಗ್ಗೆ ಸಂಪೂರ್ಣ ವಿವರಗಳನ್ನು ಮಾನ್ಯ ಸಿಂಡಿಕೇಟು ಸದಸ್ಯರುಗಳಿಗೆ ನೀಡಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.5:7(2025)

ವಿಷಯ: ಶ್ರೀ ರಘುರಾಜ್ ಕೆ., ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ - ಬಗ್ಗೆ.

ವಿಷಯ : 2018 ರಿಂದ 2023ರವರೆಗೆ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ಮತ್ತು ಹೊರಗುತ್ತಿಗೆ ಆಧಾರದಲ್ಲಿ ಲಭ್ಯವಿದ್ದ ಹುದ್ದೆಗಳ ಸಂಖ್ಯೆ ಮೀರಿ ನೇಮಕ ಮಾಡಲಾದ ಹೆಚ್ಚುವರಿ ಸಿಬ್ಬಂದಿಗಳ ಸಂಖ್ಯೆಯ ವಿವರ ಮತ್ತು ಇದರಿಂದ ವಿಶ್ವವಿದ್ಯಾನಿಲಯಕ್ಕೆ ಆಗಿರುವ ನಷ್ಟದ ಮೊತ್ತವನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಚರ್ಚೆ ನಡೆಸುವುದು. ಈ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ವಿಶ್ವವಿದ್ಯಾನಿಲಯಕ್ಕೆ ನೀಡಲ್ಪಟ್ಟ ನಿರ್ದೇಶನದ ವಿವರ ಮತ್ತು ವಿಶ್ವವಿದ್ಯಾನಿಲಯ ಈ ಬಗ್ಗೆ ಕೈಗೊಂಡ ಕ್ರಮ.

**ನಿರ್ಣಯ:** ತಾತ್ಕಾಲಿಕ ಮತ್ತು ಹೊರಗುತ್ತಿಗೆ ಆಧಾರದಲ್ಲಿ ಲಭ್ಯವಿದ್ದ ಹುದ್ದೆಗಳ ಸಂಖ್ಯೆ ಮೀರಿ ನೇಮಕ ಮಾಡಲಾದ ಹೆಚ್ಚುವರಿ ಸಿಬ್ಬಂದಿಗಳ ಸಂಖ್ಯೆಯ ವಿವರ ಮತ್ತು ಇದರಿಂದ ವಿಶ್ವವಿದ್ಯಾನಿಲಯಕ್ಕೆ ಆಗಿರುವ ನಷ್ಟದ ಕುರಿತು ತನಿಖೆ ಮಾಡುವ ಸಲುವಾಗಿ ಈ ಕೆಳಗಿನಂತೆ ಸಮಿತಿ ರಚಿಸಲು ನಿರ್ಣಯಿಸಲಾಯಿತು.

1. ಶ್ರೀ ಸುರೇಶ್ ಕುಮಾರ್ ಬಿ. ನಾವೂರು - ಅಧ್ಯಕ್ಷರು
2. ಶ್ರೀ ರಘುರಾಜ್
3. ಡಾ.ಕೆ.ಸಿ. ಮಹದೇಶ
4. ಡಾ. ಎಸ್.ಬಿ.ಎಂ. ಪ್ರಸನ್ನ
5. ಕುಲಸಚಿವರು (ಪರೀಕ್ಷಾಂಗ)
6. ಸಹಾಯಕ ಕುಲಸಚಿವರು, ಸಿಬ್ಬಂದಿ ಶಾಖೆ - ಸದಸ್ಯ ಕಾರ್ಯದರ್ಶಿ

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.5:8(2025)

ವಿಷಯ: ಡಾ.ಎಸ್.ಬಿ.ಎಂ.ಪ್ರಸನ್ನ, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ - ಬಗ್ಗೆ.

ವಿಷಯ-1 : ಡಿಇವಿ:ಸಾ.ಸ.3:1(2025)ಗೆ ಸಂಬಂಧಪಟ್ಟಂತೆ ಮಂಗಳೂರು ವಿಶ್ವವಿದ್ಯಾನಿಲಯದ ಜಮೀನಿನಲ್ಲಿ ತಾಲೂಕು ಮಟ್ಟದ ಕಚೇರಿಗಳ ನಿರ್ಮಾಣಕ್ಕೆ ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ ಇವರು ಸಲ್ಲಿಸಿರುವ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಈ ವಿಷಯಕ್ಕೆ ಸಂಬಂಧಿಸಿದಂತೆ ಕಾರ್ಯಸೂಚಿ ಸಂಖ್ಯೆ ಡಿಇವಿ:ಸಾ.ಸ.5:1 (2025)ರ ನಿರ್ಣಯದಂತೆ ಕ್ರಮ ಕೈಗೊಳ್ಳುವುದಾಗಿ ತಿಳಿಸಲಾಯಿತು.

ವಿಷಯ-2 : ಡಿಇವಿ:ಸಾ.ಸ.3:2(2025)ಗೆ ಸಂಬಂಧಪಟ್ಟಂತೆ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಸರ್ವೇ ನಂಬ್ರ 113 ರಲ್ಲಿ 2.50 ಎಕರೆ ಜಮೀನನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ಮಂಜೂರು ಮಾಡುವ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಈ ವಿಷಯಕ್ಕೆ ಸಂಬಂಧಿಸಿದಂತೆ ಕಾರ್ಯಸೂಚಿ ಸಂಖ್ಯೆ ಡಿಇವಿ:ಸಾ.ಸ.5:2 (2025)ರ ನಿರ್ಣಯದಂತೆ ಕ್ರಮ ಕೈಗೊಳ್ಳುವುದಾಗಿ ತಿಳಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.5:9(2025)

ವಿಷಯ: ಶ್ರೀ ಸುರೇಶ್ ಬಿ. ನಾವೂರು, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ - ಬಗ್ಗೆ.

ವಿಷಯ-2 : ವಿಶ್ವವಿದ್ಯಾನಿಲಯದಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರದ ಹಾಗೂ ಇನ್ನಿತರ ಅನುದಾನಗಳನ್ನು ಬಳಸಿ ಕೈಗೊಳ್ಳಲಾಗುವ ಕಾಮಗಾರಿಗಳ ಪ್ರಗತಿ ಪರಿಶೀಲನೆ ಮಾಡಲು ಮತ್ತು ಈ ಮೊದಲು ನಡೆದಿರುವ ಹಲವಾರು ಅವ್ಯವಹಾರಗಳು ಮಾಧ್ಯಮಗಳಲ್ಲಿ ಇತ್ತೀಚೆಗೆ ಸುದ್ದಿಯಾಗುತ್ತಿದ್ದು, ಇದನ್ನು ತಡೆಗಟ್ಟಲು ಸಿಂಡಿಕೇಟ್‌ನಲ್ಲಿ ಕಾಮಗಾರಿಗಳ ವೀಕ್ಷಣೆಗೆ ಸಮಿತಿ ರಚಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದು.

**ನಿರ್ಣಯ:** ಮಾನ್ಯ ಸಿಂಡಿಕೇಟು ಸದಸ್ಯರುಗಳಾದ ಶ್ರೀ ರಘುರಾಜ್ ಮತ್ತು ಶ್ರೀಮತಿ ಜೂಡಿತ್ ಮೆಂಡೋನ್ಸ ಇವರು ಸಿಂಡಿಕೇಟು ಪ್ರತಿನಿಧಿಗಳಾಗಿ ಈಗಾಗಲೇ ಕಟ್ಟಡ ಸಮಿತಿಯ ಸದಸ್ಯರುಗಳಾಗಿರುವುದರಿಂದ ಸದರಿಯವರೇ ಕಾಮಗಾರಿಗಳನ್ನು ವೀಕ್ಷಣೆ ಮಾಡಬಹುದೆಂದು ನಿರ್ಣಯಿಸಲಾಯಿತು.

ವಿಷಯ-3: ವಿಶ್ವವಿದ್ಯಾನಿಲಯದಲ್ಲಿ ಈ ಮೊದಲು ಹಣಕಾಸು ಅವ್ಯವಹಾರ ನಡೆಸಿರುವ ಕೆಲವೊಂದು ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ಮುಖ್ಯಸ್ಥರುಗಳ ಬಗ್ಗೆ ಈವರೆಗೂ ಯಾವುದು ಕ್ರಮ ಕೈಗೊಳ್ಳದೆ ಇದ್ದು, ಈ ಬಗ್ಗೆ ಸಾರ್ವಜನಿಕವಾಗಿ ವ್ಯಾಪಕ ಟೀಕೆಗಳು ವ್ಯಕ್ತವಾಗುತ್ತಿದ್ದು, ಈ ಬಗ್ಗೆ ಸೂಕ್ತ ಕಾರಣಗಳ ಬಗ್ಗೆ ಚರ್ಚಿಸಿ ಸೂಕ್ತ ಕ್ರಮಕೈಗೊಳ್ಳುವುದು.

**ನಿರ್ಣಯ:** ಕರ್ನಾಟಕ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿಯು ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿ ಪರಿಶೀಲಿಸಲಿರುವುದರಿಂದ ಆ ನಂತರದಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.5:10(2025)

ವಿಷಯ: ಡಾ.ಎಸ್.ಬಿ.ಎಂ. ಪ್ರಸನ್ನ, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ - ಬಗ್ಗೆ.

ವಿಷಯ-3 : 2025ರ ಘಟಿಕೋತ್ಸವವನ್ನು ಯಶಸ್ವಿಯಾಗಿ ನಡೆಸಿದ ಕುಲಪತಿಗಳು ಹಾಗೂ ಕುಲಸಚಿವರು ಮತ್ತು ಮಂಗಳೂರು ವಿಶ್ವವಿದ್ಯಾನಿಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ಅಭಿನಂದನೆ ಸಲ್ಲಿಸುತ್ತಾ ಘಟಿಕೋತ್ಸವಕ್ಕೆ ಆದ ಖರ್ಚು ವೆಚ್ಚಗಳನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸುವುದು.

**ನಿರ್ಣಯ:** ಮಾಹಿತಿ ನೀಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.5:11(2025)

ವಿಷಯ: ಡಾ. ಸಂದೇಶ್ ಕೆ.ಎಸ್, ಇವರು ಸಲ್ಲಿಸಿರುವ ಪ್ರಸ್ತಾವನೆ - "Proposal to Adopt Hybrid Mode for Ph.D. Coursework (Excluding Laboratory Subjects) In Compliance with UGC Regulations".

**ನಿರ್ಣಯ:** ಸಂಶೋಧನಾ ಗುಣಮಟ್ಟವನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ Hybrid mode ನಲ್ಲಿ ಕೋರ್ಸುವರ್ಕನ್ನು ನಡೆಸುವುದು ಸಮಂಜಸವಲ್ಲದಿರುವುದರಿಂದ ಪ್ರಸ್ತಾವನೆಯನ್ನು ಪರಿಗಣಿಸದಿರಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ:ಸಾ.ಸ.5:12(2025)

ವಿಷಯ: ಶೈಕ್ಷಣಿಕ ವರ್ಷ 2025-26ನೇ ಸಾಲಿಗೆ ಸ್ನಾತಕೋತ್ತರ ಕಾರ್ಯಕ್ರಮಗಳ ಪ್ರವೇಶಾತಿ ಶುಲ್ಕಗಳನ್ನು ಪರಿಷ್ಕರಿಸಿ ನಿಗದಿಪಡಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಮಾನ್ಯ ಸಿಂಡಿಕೇಟು ಸದಸ್ಯರಾದ ಡಾ.ಕೆ.ಸಿ. ಮಹದೇಶ ಹಾಗೂ ಇತರೇ ಸದಸ್ಯರುಗಳ ಸಲಹೆ ಮೇರೆಗೆ ಕುಲಪತಿಯವರ ನಿಧಿಯಿಂದ ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ಸ್ನಾತಕೋತ್ತರ ಶಿಕ್ಷಣ ನೀಡುವ ಕುರಿತು ಮಾನದಂಡಗಳನ್ನು ನಿಗದಿಪಡಿಸುವ ಬಗ್ಗೆ ಪರಿಶೀಲಿಸಲು ನಿರ್ಣಯಿಸಲಾಯಿತು.

ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ಗೌರವ ಡಾಕ್ಟರೇಟ್ ಪಡೆದಿರುವ ಗಣ್ಯರ ನೆರವನ್ನು ಪಡೆದು ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಉಚಿತ ಸ್ನಾತಕೋತ್ತರ ಶಿಕ್ಷಣ ನೀಡುವ ನಿಟ್ಟಿನಲ್ಲಿ **ಕಾರ್ಪಸ್ ಫಂಡ್** ರಚಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ:ಸಾ.ಸ.5:13(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಸಮಾಜ ಕಾರ್ಯ ವಿಭಾಗದಲ್ಲಿ ಸಂಶೋಧನಾ ವಿದ್ಯಾರ್ಥಿಗಳ ಕೋರ್ಸ್‌ವರ್ಕ್ ಪರೀಕ್ಷೆಗೆ ಸಂಬಂಧಿಸಿ ರಚಿಸಿದ ಡಾಕ್ಟರಲ್ ಕಮಿಟಿಯ ಅಸಮರ್ಪಕ ನಿರ್ವಹಣೆಯ ಬಗ್ಗೆ ಹಾಗೂ ಪರ್ಯಾಯ ಸಮಿತಿಯನ್ನು ರಚಿಸುವ ಬಗ್ಗೆ.

**ನಿರ್ಣಯ:** ಎಂ.ಎಸ್.ಡಬ್ಲ್ಯೂ. ಪಿಹೆಚ್.ಡಿ. ಕೋರ್ಸ್ ವರ್ಕ್ ವಿಷಯ ತಜ್ಞರ ಪರ್ಯಾಯ ಸಮಿತಿಯ ನಿರ್ಣಯ ಪರಿಗಣಿಸಿ ಫಲಿತಾಂಶವನ್ನು ಪ್ರಕಟಿಸಲು ಅನುಮೋದಿಸಲಾಯಿತು.

ಎಂ.ಎಸ್.ಡಬ್ಲ್ಯೂ ವಿಭಾಗದಲ್ಲಿ ನಡೆಯುತ್ತಿರುವ ಗೊಂದಲಗಳನ್ನು ಪರಿಹರಿಸುವ ನಿಟ್ಟಿನಲ್ಲಿ ವರದಿ ನೀಡಲು ಈ ಕೆಳಗಿನಂತೆ ಸಮಿತಿ ರಚಿಸಲು ನಿರ್ಣಯಿಸಲಾಯಿತು.

1. ಶ್ರೀ ಸುರೇಶ್ ಕುಮಾರ್ ಬಿ. ನಾವೂರು - ಅಧ್ಯಕ್ಷರು
2. ಶ್ರೀ ರಘುರಾಜ್
3. ಡಾ.ಕೆ.ಸಿ. ಮಹದೇಶ
4. ಡಾ. ಎಸ್.ಬಿ.ಎಂ. ಪ್ರಸನ್ನ
5. ಕುಲಸಚಿವರು (ಪರೀಕ್ಷಾಂಗ)
6. ಸಹಾಯಕ ಕುಲಸಚಿವರು, ಸಿಬ್ಬಂದಿ ಶಾಖೆ - ಸದಸ್ಯ ಕಾರ್ಯದರ್ಶಿ

| | |
|---|---|
| ಕಾರ್ಯಸೂಚಿ ಸಂಖ್ಯೆ: | ಪರೀಕ್ಷಾಂಗ:ಸಾ.ಸ.5:14(2025) |
| ವಿಷಯ: | ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಡಿಜಿಟಲ್ ಮೌಲ್ಯಮಾಪನ ಮಾಡುವ ಬಗ್ಗೆ. |
| **ನಿರ್ಣಯ:** | Manual ಮೌಲ್ಯಮಾಪನಕ್ಕೆ ತಗಲುವ ವೆಚ್ಚ, ವಿದ್ಯಾರ್ಥಿಗಳ ಅಂಕಿ ಅಂಶಗಳು, ಖರ್ಚಿನ ವಿವರ ಹಾಗೂ ಡಿಜಿಟಲ್ ಮೌಲ್ಯಮಾಪನದಿಂದಾಗುವ ಉಳಿತಾಯದ ಬಗ್ಗೆ ಪೂರ್ಣ ವಿವರಗಳೊಂದಿಗೆ ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿಯನ್ನು ಮಂಡಿಸಲು ನಿರ್ಣಯಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಹಣಕಾಸು:ಸಾ.ಸ.5:15(2025) |
| ವಿಷಯ: | 2024-25ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಅನುಮೋದನೆಯ ಬಗ್ಗೆ. |
| **ನಿರ್ಣಯ:** | ಸರ್ಕಾರಕ್ಕೆ ತ್ವರಿತವಾಗಿ ವಾರ್ಷಿಕ ಲೆಕ್ಕಪತ್ರಗಳ ವರದಿಯನ್ನು ಕಳುಹಿಸಿಕೊಡಬೇಕಾಗಿರುವುದರಿಂದ ಹಾಗೂ ಸಿಂಡಿಕೇಟು ಸಭೆಯಲ್ಲಿ ಸವಿವರವಾಗಿ ಚರ್ಚಿಸಲು ಕಾಲಾವಕಾಶ ಕಡಿಮೆ ಇರುವುದರಿಂದ ಮತ್ತೊಮ್ಮೆ ಪರಿಶೀಲಿಸುವ ಷರತ್ತಿಗೊಳಪಟ್ಟು ಅನುಮೋದಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಡಿಇವಿ:ಸಾ.ಸ.5:16(2025) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯ, ಗಣಕಯಂತ್ರ ಕೇಂದ್ರದ Networking Devices, Wifi Devices ಮತ್ತು Firewall ನ ವಾರ್ಷಿಕ ನಿರ್ವಹಣೆಯ ಟೆಂಡರ್ ಪ್ರಸ್ತಾವನೆ ಬಗ್ಗೆ. |
| **ನಿರ್ಣಯ:** | ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಡಿಇವಿ:ಸಾ.ಸ.5:17(2025) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದ ಗಣಕಯಂತ್ರ ಕೇಂದ್ರಕ್ಕೆ ಕಲ್ಪಿಸಲಾದ 500 Mbps Internet Leased Line ಸಂಪರ್ಕದ ಹೆಚ್ಚುವರಿ ಸೇವಾ ಅವಧಿಗೆ ಬಳಸಿಕೊಂಡಿರುವುದಕ್ಕೆ ಮಂಜೂರಾತಿ ನೀಡುವ ಬಗ್ಗೆ. |
| **ನಿರ್ಣಯ:** | ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಡಿಇವಿ:ಸಾ.ಸ.5:18(2025) |
| ವಿಷಯ: | ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ - ಪದವಿ (ಮೂರನೇ ಹಾಗೂ ನಾಲ್ಕನೇ ಚತುರ್ಮಾಸ) ಪಠ್ಯಪುಸ್ತಕಗಳನ್ನು ಮುದ್ರಿಸುವ ಪ್ರಸ್ತಾವನೆ ಬಗ್ಗೆ. |
| **ನಿರ್ಣಯ:** | ಅನುಮೋದಿಸಲಾಯಿತು. |

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.5:19(2025)

ವಿಷಯ: ಅನ್ವಯಿಕ ಪ್ರಾಣಿಶಾಸ್ತ್ರ ವಿಭಾಗಕ್ಕೆ ಅಗತ್ಯವಿರುವ ರಾಸಾಯನಿಕಗಳು / ಗ್ಲಾಸ್‌ವೇರ್ / ಉಪಯೋಗಿ ವಸ್ತುಗಳ ಖರೀದಿ ಪ್ರಸ್ತಾವನೆಯ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.5:20(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಸಲಹಾ ಸಮಿತಿ ಸಭೆಯ ನಡವಳಿಯ ಅನುಮೋದನೆ ಬಗ್ಗೆ.

**ನಿರ್ಣಯ:** 2024-25ನೇ ಸಾಲಿನ ಪ್ರಸಾರಾಂಗದ ಖರ್ಚು ವೆಚ್ಚದ ವಿವರಗಳನ್ನು ಮಾನ್ಯ ಸಿಂಡಿಕೇಟು ಸದಸ್ಯರುಗಳಿಗೆ ಒದಗಿಸುವ ಷರತ್ತಿನ ಮೇರೆಗೆ ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.5:21(2025)

ವಿಷಯ: ಯುಜಿಸಿ ನಿಯಮಾವಳಿ 2018ರ ಪ್ರಕಾರ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂನಡಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳ ಬೋಧಕರಿಗೆ ವೃತ್ತಿ ಪದೋನ್ನತಿ - ಸ್ಕ್ರೀನಿಂಗ್ ಕಂ ಇವ್ಯಾಲ್ಯೂವೇಶನ್ ಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.5:22(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಕುಲಪತಿಯವರು ಯುನೈಟೆಡ್ ಕಿಂಗ್ ಡಮ್‌ನಲ್ಲಿ ನಡೆಯಲಿರುವ Leadership Development Programme ನಲ್ಲಿ ಭಾಗವಹಿಸಲು ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.5:23(2025)

ವಿಷಯ: ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ ಇಲ್ಲಿನ ಕುಲಪತಿಗಳಾಗಿ ಡಾ.ಐರಾನಿ ಮೊಹಮ್ಮದ್ ಖಾನ್, ಹಿರಿಯ ಪ್ರಾಧ್ಯಾಪಕರು, ಇಲೆಕ್ಟ್ರಾನಿಕ್ಸ್ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರ ನೇಮಕಾತಿ - ಕರ್ತವ್ಯದಿಂದ ಬಿಡುಗಡೆ ಹಾಗೂ ಇಲೆಕ್ಟ್ರಾನಿಕ್ಸ್ ವಿಭಾಗದಲ್ಲಿನ ಹುದ್ದೆಯ ಹಕ್ಕುಸ್ವಾಮ್ಯವನ್ನು ಕಾಯ್ದಿರಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.5:24(2025)

ವಿಷಯ: ಡಾ.ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಇಕನಾಮಿಕ್ಸ್ ವಿಶ್ವವಿದ್ಯಾನಿಲಯ, ಬೆಂಗಳೂರು ಇಲ್ಲಿನ ಕುಲಪತಿಗಳಾಗಿ ಡಾ.ವಿಶ್ವನಾಥ, ಹಿರಿಯ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರ ನೇಮಕಾತಿ - ಕರ್ತವ್ಯದಿಂದ ಬಿಡುಗಡೆ ಹಾಗೂ ಅರ್ಥಶಾಸ್ತ್ರ ವಿಭಾಗದಲ್ಲಿನ ಹುದ್ದೆಯ ಹಕ್ಕುಸ್ವಾಮ್ಯವನ್ನು ಕಾಯ್ದಿರಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಾರ್ವತ್ರಿಕ:ಸಾ.ಸ.5:25(2025)

ವಿಷಯ: World University Games - 2025 ರ ಅಥ್ಲೆಟಿಕ್ಸ್‌ನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಿಂದ ಆಯ್ಕೆಗೊಂಡ ಕ್ರೀಡಾಪಟುಗಳ ಭಾಗವಹಿಸುವಿಕೆಯ ಖರ್ಚು ವೆಚ್ಚಗಳಿಗೆ ಮುಂಗಡ ಪಾವತಿಗೆ ಘಟನೋತ್ತರ ಮಂಜೂರಾತಿ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಆಡಳಿತ:ಸಾ.ಸ.5:26(2025)

ವಿಷಯ: RUSA 2.0 Component 9 ಯೋಜನೆಯಡಿ ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿಗೆ ಮಂಜೂರಾದ ಅನುದಾನದಿಂದ 25 ಸಂಖ್ಯೆಯ ಕಂಪ್ಯೂಟರ್‌ಗಳನ್ನು ಖರೀದಿಸುವ ಕುರಿತು ಘಟನೋತ್ತರ ಅನುಮೋದನೆ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಆಡಳಿತ:ಸಾ.ಸ.5:27(2025)

ವಿಷಯ: ಶ್ರೀಮತಿ ಲಾವಣ್ಯ, ಪ್ರಥಮ ದರ್ಜೆ ಸಹಾಯಕರು, ಹಣಕಾಸು ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರ ಪತಿಯ (ಅವಲಂಬಿತರು) ವೈದ್ಯಕೀಯ ವೆಚ್ಚದ ಪಾವತಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.5:28(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಮತ್ತು Bearys Institute of Technology, Mangalore ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಯ ಅನುಮೋದನೆ ಬಗ್ಗೆ.

**ನಿರ್ಣಯ:** ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.5:29(2025)

ವಿಷಯ: ಶ್ರೀ ಸಂತೋಷ್ ಕುಮಾರ್ ಶೆಟ್ಟಿ ಪಿ., ಸಹಾಯಕ ಕಾರ್ಯಪಾಲಕ ಇಂಜಿನಿಯರ್ , ಇವರನ್ನು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಖಾಲಿಯಿರುವ ಸಹಾಯಕ ಕಾರ್ಯಕಾರಿ ಅಭಿಯಂತರರ ಹುದ್ದೆಗೆ ನೇಮಿಸಿಕೊಳ್ಳುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.5:30(2025)

ವಿಷಯ: ಡಾ.ಕೆ.ಎಸ್.ಚಂದ್ರಶೇಖರಯ್ಯ, ಪ್ರಾಧ್ಯಾಪಕರು, ಸ್ನಾತಕೋತ್ತರ ಜೀವರಸಾಯನಶಾಸ್ತ್ರ ವಿಭಾಗ, ಜ್ಞಾನಕಾವೇರಿ ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಇವರನ್ನು ಅಂತರ್ ವಿಶ್ವವಿದ್ಯಾನಿಲಯ ವರ್ಗಾವಣೆ ಪ್ರಯುಕ್ತ ಮಂಗಳೂರು ವಿಶ್ವವಿದ್ಯಾನಿಲಯದ ಸೇವೆಯಿಂದ ಬಿಡುಗಡೆಗೊಳಿಸಿರುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಡಾ.ಕೆ.ಎಸ್.ಚಂದ್ರಶೇಖರಯ್ಯ ಇವರನ್ನು ವರ್ಗಾವಣೆ ಮಾಡಿದ ಮಾದರಿಯಲ್ಲಿಯೇ ಡಾ. ರಾಜೇಂದ್ರ ಆರ್., ಡಾ. ಬಿಷ್ಟಪ್ಪ ಹನುಮಂತಪ್ಪ ತಳವಾರ್, ಮೇಜರ್ ಡಾ. ರಾಘವ ಬಿ. ಮತ್ತು ಡಾ. ತಿಪ್ಪೇಸ್ವಾಮಿ ಇ. ಇವರುಗಳನ್ನು ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜಿಗೆ ಸರ್ಕಾರ ವಿಧಿಸುವ ಷರತ್ತುಗಳಿಗೆ ಒಳಪಟ್ಟು ವರ್ಗಾವಣೆ ಮಾಡುವ ಕುರಿತು ಸರ್ಕಾರಕ್ಕೆ ಪತ್ರ ಬರೆಯಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.5:31(2025)

ವಿಷಯ: IQAC, ಮಂಗಳೂರು ವಿಶ್ವವಿದ್ಯಾನಿಲಯ ಇಲ್ಲಿನ ಎಪ್ರಿಲ್ 2025 ಮತ್ತು ಮೇ 2025ರ ಚಟುವಟಿಕೆಯ ಮುಖ್ಯಾಂಶದ ವರದಿಯನ್ನು ಅವಗಾಹನೆಗೆ ಮಂಡಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ:ಸಾ.ಸ.5:32(2025)

ವಿಷಯ: Poornaprajna Institute of Management, ಉಡುಪಿ, ಇಲ್ಲಿರುವ ಸ್ನಾತಕೋತ್ತರ ಎಂ.ಬಿ.ಎ. ವಿಭಾಗವನ್ನು ಪಿಹೆಚ್.ಡಿ. ವ್ಯಾಸಂಗಕ್ಕೆ ಸಂಶೋಧನಾ ಕೇಂದ್ರವಾಗಿ ಮಾನ್ಯತೆ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ:ಸಾ.ಸ.5:33(2025)

ವಿಷಯ: ಡಿಸೆಂಬರ್ - 2024, ಜನವರಿ / ಫೆಬ್ರವರಿ 2025ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪದವಿ / ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ನಡೆಸಿದ ಅವ್ಯವಹಾರಗಳು - ದಂಡನೆಯನ್ನು ದೃಢಪಡಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ:ಸಾ.ಸ.5:34(2025)

ವಿಷಯ: ಶೈಕ್ಷಣಿಕ ವರ್ಷ 2025-26ನೇ ಸಾಲಿನಿಂದ ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜಾದ ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿ ಬಿಸಿಎ ಕಾರ್ಯಕ್ರಮವನ್ನು ಪ್ರಾರಂಭಿಸುವ ಪ್ರಸ್ತಾವನೆಗೆ ಅನುಮೋದನೆ ನೀಡುವ ಬಗ್ಗೆ.

**ನಿರ್ಣಯ:** ಪ್ರೊ. ಬಿ.ಹೆಚ್. ಶೇಖರ್ ಇವರು ನೀಡಿರುವ ವರದಿಯ ಆಧಾರದ ಮೇಲೆ ಬಿ.ಸಿ.ಎ. ಕಾರ್ಯಕ್ರಮವನ್ನು ಪ್ರಾರಂಭಿಸಲು ಅನುಮೋದನೆ ನೀಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.5:35(2025)

ವಿಷಯ: IQAC, ಮಂಗಳೂರು ವಿಶ್ವವಿದ್ಯಾನಿಲಯ ಇಲ್ಲಿನ ಜೂನ್ 2025ರ ಚಟುವಟಿಕೆಯ ಮುಖ್ಯಾಂಶದ ವರದಿಯನ್ನು ಅವಗಾಹನೆಗೆ ಮಂಡಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.5:36(2025)

ವಿಷಯ: ಸ್ನಾತಕೋತ್ತರ ಜಿಯೋಇನ್‌ಫಾರ್ಮೆಟಿಕ್ಸ್ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಅಧ್ಯಯನ ಮಂಡಳಿಯ ಪುನರ್ರಚನೆಯ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.5:37(2025)

ವಿಷಯ: ಶ್ರೀ ರಘುರಾಜ್ ಕೆ., ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ - ಬಗ್ಗೆ.

ವಿಷಯ-1 : **ಸ್ನಾತಕೋತ್ತರ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕದ ಗೊಂದಲ:**

2022-23 ಮತ್ತು 2023-24ನೇ ಸಾಲಿನ ಸ್ನಾತಕೋತ್ತರ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕದ ಗೊಂದಲದಿಂದ ವಿದ್ಯಾರ್ಥಿಗಳು, ವಿಶೇಷವಾಗಿ ದಲಿತ ವಿದ್ಯಾರ್ಥಿಗಳು ತೀವ್ರ ಸಮಸ್ಯೆಯಲ್ಲಿರುವುದು ವಿದ್ಯಾರ್ಥಿಗಳಿಂದ ಕಂಡು

ಬರುತ್ತಿದೆ. ದಿನಾಂಕ 19.04.2025 ರಂದು ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, SSP ಹಣ ಪಡೆದು ಉಳಿದ ಬಾಕಿ ಮೊತ್ತವನ್ನು ವಿದ್ಯಾರ್ಥಿಗಳು ಕಟ್ಟಬೇಕಿಲ್ಲ ಎಂದು ನಿರ್ಧಾರ ಕೈಗೊಂಡಿದೆ. ಆದರೆ, ವಿಭಾಗದ ಮುಖ್ಯಸ್ಥರುಗಳು ಇನ್ನೂ ಹೆಚ್ಚಿನ ಶುಲ್ಕಕ್ಕೆ ಒತ್ತಾಯಿಸುತ್ತಿದ್ದು, ಇದು ವಿದ್ಯಾರ್ಥಿಗಳಿಗೆ ಮಾನಸಿಕ ಒತ್ತಡವನ್ನುಂಟು ಮಾಡಿದೆ. ವಿಶ್ವವಿದ್ಯಾನಿಲಯದ ಸೂಚನೆಯಲ್ಲಿರುವ ದ್ವಂದ್ವ ನಿಲುವುಗಳು ಇದಕ್ಕೆ ಕಾರಣವಾಗಿವೆ.

**ನಿರ್ಣಯ:** ಮಾಹಿತಿ ನೀಡಲಾಯಿತು.

ವಿಷಯ -2: **SC/ST ಸಂಶೋಧನಾ ಶಿಷ್ಯವೇತನ ಕುರಿತು ಗೊಂದಲ:**

ವಿಶ್ವವಿದ್ಯಾನಿಲಯದಲ್ಲಿ SC/ST ವಿದ್ಯಾರ್ಥಿಗಳಿಗೆ ಮಾಸಿಕ ಸಂಶೋಧನಾ ಶಿಷ್ಯವೇತನ ರೂ. 25,000 ದೊರೆಯುತ್ತಿದೆ. ಆದರೆ, 17.06.2025 ರಂದು ಹೊರಡಿಸಿದ Ph.D. ಪ್ರವೇಶಾತಿಯ ಸೂಚನೆಯಲ್ಲಿ, Point no 9 ರಲ್ಲಿ "Research students belonging to SC/ST category may avail SC/ST fellowship at the rate sanctioned by the government of Karnataka only if they are not availing any other fellowship/scholarship from other agencies" ಎಂದು ನಮೂದಿಸಿರುವುದು ಮುಂದಿನ ಪ್ರವೇಶಾತಿ ಪಡೆಯಲಿರುವ ವಿದ್ಯಾರ್ಥಿಗಳಲ್ಲಿ ಗೊಂದಲ ಮೂಡಿಸಿದೆ. SC/ST ಘಟಕದಲ್ಲಿಯೂ ಈ ಕುರಿತು ಯಾವುದೇ ಸ್ಪಷ್ಟ ಮಾಹಿತಿ ಇಲ್ಲ.

**ನಿರ್ಣಯ:** ಮಾಹಿತಿ ನೀಡಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.5:38(2025)

ವಿಷಯ: ಶ್ರೀ ಅಚ್ಚುತ ಗಟ್ಟಿ, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ - ಬಗ್ಗೆ.

ವಿಷಯ-1 : ಮಂಗಳೂರು ವಿಶ್ವವಿದ್ಯಾನಿಲಯ ಜಮೀನಿನ ನಕ್ಷೆಯ ಬಗ್ಗೆ 09.12.2024ರಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಇನ್ನು ಕೂಡ ಜಮೀನಿನ ನಕ್ಷೆ ಸಭೆಗೆ ಮಂಡನೆಯಾಗಿಲ್ಲ. ಈ ಬಗ್ಗೆ ಮಾಹಿತಿ ನೀಡುವುದಕ್ಕೆ ಪ್ರಸ್ತಾವನೆ.

**ನಿರ್ಣಯ:** ಮಾಹಿತಿ ನೀಡಲಾಯಿತು.

ವಿಷಯ-2 : ವಿಶ್ವವಿದ್ಯಾನಿಲಯದ ವ್ಯಾಪ್ತಿಯ 11 ಸರಕಾರಿ ಶಾಲೆಗಳ ದತ್ತು ಸ್ವೀಕಾರದಲ್ಲಿ ಏನೆಲ್ಲಾ ಕಾರ್ಯಕ್ರಮ ಆಗಿರುತ್ತದೆ ಎಂಬುದರ ಬಗ್ಗೆ ನೆಹರೂ ಅಧ್ಯಯನ ಪೀಠದಿಂದ ಸಮೀಕ್ಷೆ ಮಾಡಿರುವ ವರದಿಯನ್ನು ಇನ್ನೂ ಕೂಡಾ ಸಿಂಡಿಕೇಟ್ ಸಭೆಗೆ ಮಂಡಿಸಲಾಗಿಲ್ಲ. ಈ ಬಗ್ಗೆ ಮಾಹಿತಿ ನೀಡುವುದಕ್ಕೆ ಪ್ರಸ್ತಾವನೆ.

**ನಿರ್ಣಯ:** ಮಾಹಿತಿ ನೀಡಲಾಯಿತು.

| | |
|---|---|
| ವಿಷಯ-3 : | ಮಂಗಳೂರು ವಿಶ್ವವಿದ್ಯಾನಿಲಯದ 22 ಪೀಠಗಳ ಕಾರ್ಯಕ್ರಮಗಳ ಮಾಹಿತಿ ಸಿಕ್ಕಿದೆ. ಪೀಠಗಳ ನಿರ್ದೇಶಕರ ಅವಧಿ 2 ವರ್ಷ ಎಂಬ ಮಾಹಿತಿ ಸಿಕ್ಕಿದೆ. ಆದರೆ ನಿರ್ದೇಶಕರ ಆಯ್ಕೆ ಹಾಗೂ ಸದಸ್ಯರ ಆಯ್ಕೆಯಾಗಿರುವ ಬಗ್ಗೆ ಮಾಹಿತಿ ಸಿಕ್ಕಿಲ್ಲ. ಮಾಹಿತಿಗಾಗಿ ಪ್ರಸ್ತಾವನೆ. |
| **ನಿರ್ಣಯ:** | ಮಾಹಿತಿ ನೀಡಲಾಯಿತು. |
| ಕಾರ್ಯಸೂಚಿ ಸಂಖ್ಯೆ: | ಸಿಂಡಿಕೇಟು:ಸಾ.ಸ.5:39(2025) |
| ವಿಷಯ: | ಡಾ.ಕೆ.ಸಿ. ಮಹದೇಶ, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ - ಬಗ್ಗೆ. |
| ವಿಷಯ-1 : | ಪ್ರಸ್ತುತ ಮಂಗಳೂರು ವಿಶ್ವವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧ್ಯಾಪಕರು ಮತ್ತು ಅಧ್ಯಾಪಕೇತರ ಸಿಬ್ಬಂದಿಗಳ ಸಂಖ್ಯೆ ಮತ್ತು ಸರ್ಕಾರದ ಅನುದಾನದಿಂದ ಅವರಿಗೆ ನೀಡುತ್ತಿರುವ ಸಂಬಳದ ವಿವರಗಳು ಮತ್ತು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲಗಳಿಂದ ಸಂಬಳ ನೀಡುತ್ತಿರುವ ಸಿಬ್ಬಂದಿಗಳ, ಅಧ್ಯಾಪಕ/ ಅಧ್ಯಾಪಕೇತರರ ವಿವರಗಳನ್ನು ತಿಳಿಸುವುದು ಮತ್ತು ಚರ್ಚಿಸಿ ನಿರ್ಣಯಿಸುವುದು. |
| **ನಿರ್ಣಯ:** | ಹಣಕಾಸು ಶಾಖೆಯು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದ ಪ್ರತಿ ತಿಂಗಳು ಖಾಯಂ ನೌಕರರ ಎನ್.ಪಿ.ಎಸ್. ವಂತಿಗೆ ಹಾಗೂ ನಿವೃತ್ತರ ಪಿಂಚಣಿಗೆ ನೀಡಲಾಗುತ್ತಿರುವ ಮೊತ್ತದ ವಿವರಗಳೊಂದಿಗೆ ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು. |
| ವಿಷಯ-2 : | ಪ್ರಸ್ತುತ ವಿಶ್ವವಿದ್ಯಾನಿಲಯದ ಟೆಂಪರರಿ ಸಿಬ್ಬಂದಿಗಳ ಸಂಖ್ಯೆ ಮತ್ತು ಅವರಿಗೆ ನೀಡುತ್ತಿರುವ ಸಂಬಳ ಕಾಲ ಕಾಲಕ್ಕೆ ಅವರಿಗೆ ವೇತನ ಹೆಚ್ಚಳದ ಬಗ್ಗೆ ಚರ್ಚಿಸಿ ನಿರ್ಣಯಿಸುವುದು. |
| **ನಿರ್ಣಯ:** | ವಿಶ್ವವಿದ್ಯಾನಿಲಯದ ಆರ್ಥಿಕ ಸಂಪನ್ಮೂಲಗಳನ್ನು ಗಮನದಲ್ಲಿಟ್ಟುಕೊಂಡು ತಾತ್ಕಾಲಿಕ ನೌಕರರನ್ನು ಪಿ.ಎಫ್. ಮತ್ತು ಇ.ಎಸ್.ಐ. ವ್ಯಾಪ್ತಿಗೆ ಒಳಪಡಿಸುವ ಬಗ್ಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳಲು ನಿರ್ಣಯಿಸಲಾಯಿತು. |
| ವಿಷಯ-3 : | ವಿಶ್ವವಿದ್ಯಾನಿಲಯದ ಜೊತೆ ಪ್ರಸ್ತುತ ಇದುವರೆಗೆ ಒಡಂಬಡಿಕೆ ಮಾಡಿಕೊಂಡು ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಗಳ ಸಂಖ್ಯೆಗಳ ಮಾಹಿತಿ ನೀಡುವುದು ಮತ್ತು ಕಾರ್ಯ ನಿರ್ವಹಿಸದೆ ಇರುವ ಸಂಸ್ಥೆಗಳ ಮಾಹಿತಿ ಮತ್ತು ಅವುಗಳ ಮೂಲಕ ವಿಶ್ವವಿದ್ಯಾನಿಲಯಕ್ಕೆ ಆಗುತ್ತಿರುವ ಅನುಕೂಲ ಮತ್ತು ಪೂರಕ ಮಾಹಿತಿಯನ್ನು ನೀಡಿ ಚರ್ಚಿಸಿ ನಿರ್ಣಯಿಸುವುದು. |

**ನಿರ್ಣಯ:** ಒಡಂಬಡಿಕೆಗಳ ಕಾರ್ಯ ಚಟುವಟಿಕೆಗಳ ವಿವರಗಳನ್ನು ಪಡೆದು ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

ವಿಷಯ-4 : ಮಂಗಳೂರು ವಿಶ್ವವಿದ್ಯಾನಿಲಯದ B.Ed./ M.Ed. ಕಾಲೇಜುಗಳ ಸಂಖ್ಯೆಗಳು ಮತ್ತು ಅವುಗಳ ಕಾರ್ಯನಿರ್ವಹಣೆ ಮತ್ತು ವಿಶ್ವವಿದ್ಯಾನಿಲಯದ ಅಡಿಯಲ್ಲಿ ಎಷ್ಟು ಸಂಸ್ಥೆಗಳಿಗೆ ಸಂಶೋಧನಾ ಕೇಂದ್ರಗಳನ್ನು ಮತ್ತು Ph.D. ನೀಡಲಾಗಿದೆ ಮತ್ತು ಅವುಗಳ ಕಾರ್ಯನಿರ್ವಹಣೆ, ವಾರ್ಷಿಕ ನವೀಕರಣದ ಸಂಪೂರ್ಣ ಮಾಹಿತಿಗಳನ್ನು ನೀಡುವುದು ಮತ್ತು ಚರ್ಚಿಸಿ ನಿರ್ಣಯಿಸುವುದು.

**ನಿರ್ಣಯ:** ವಿಶ್ವವಿದ್ಯಾನಿಲಯದಿಂದ ಮಾನ್ಯತೆ ಪಡೆದ ಸಂಶೋಧನಾ ಕೇಂದ್ರಗಳ ವಾರ್ಷಿಕ ನವೀಕರಣದ ಬಗ್ಗೆ ಮಾಹಿತಿಯನ್ನು ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

ವಿಷಯ-5 : ಮಂಗಳೂರು ವಿಶ್ವವಿದ್ಯಾನಿಲಯದ ಸೋಶಿಯಲ್ ಇನ್‌ಕ್ಲೂಸಿವ್ ಮತ್ತು ಸೋಶಿಯಲ್ ಎಕ್ಸ್‌ಕ್ಲೂಸಿವ್ ಸಂಸ್ಥೆಯ ಸಿಬ್ಬಂದಿಗಳ ಸಂಖ್ಯೆ ಮತ್ತು ಕಾರ್ಯ ನಿರ್ವಹಣೆ, ವೇತನಗಳ ಬಗ್ಗೆ ಮಾಹಿತಿ ನೀಡುವುದು ಮತ್ತು ಚರ್ಚಿಸಿ ನಿರ್ಣಯಿಸುವುದು.

**ನಿರ್ಣಯ:** ಸದ್ರಿ ಸಂಸ್ಥೆಗೆ ತಾತ್ಕಾಲಿಕವಾಗಿ ನೂತನ ನಿರ್ದೇಶಕರನ್ನು ನೇಮಕಾತಿ ಮಾಡಲು ಕೂಡಲೇ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು. ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಬಾಕಿ ಇರುವ ವೇತನದಲ್ಲಿ ತಕ್ಷಣ ಎರಡು ತಿಂಗಳುಗಳ ವೇತನವನ್ನು ಪಾವತಿಸಲು ನಿರ್ಧರಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.5:40(2025)

ವಿಷಯ: ಶ್ರೀ ರಘುರಾಜ್ ಕೆ., ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ - ಬಗ್ಗೆ.

ವಿಷಯ 1 : ವಿವಿಧ ಸಮಿತಿಯನ್ನು ಪುನರ್ ರಚಿಸಲು ನಿರ್ಣಯ ಕೈಗೊಳ್ಳುವುದು.

**ನಿರ್ಣಯ:** ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು.

ವಿಷಯ 2 : ವಿವಿಧ ಪೀಠಗಳ ಅಧ್ಯಕ್ಷರು ಹಾಗೂ ಸದಸ್ಯರ ನೇಮಕಾತಿಯಲ್ಲಿ ವಿಶ್ವವಿದ್ಯಾನಿಲಯದ ನಿಯಮದ ಮಾಹಿತಿ ಹಾಗೂ ಪೀಠಗಳ ಪುನರ್ ರಚನೆಯ ಬಗ್ಗೆ ಮಾಹಿತಿ ಹಾಗೂ ಚರ್ಚಿಸಿ ನಿರ್ಣಯ ಕೈಗೊಳ್ಳುವುದು.

**ನಿರ್ಣಯ:** ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು.

| | |
|---|---|
| ವಿಷಯ 3 : | ಜೂನ್ ತಿಂಗಳ ವಿದ್ಯುತ್ ಬಿಲ್ ನ್ನು ಸಿಂಡಿಕೇಟ್ ಗೆ ಸಲ್ಲಿಸುವುದು ಮತ್ತು ವಿದ್ಯುತ್ ಬಿಲ್ ಕಡಿತಗೊಳಿಸಲು ಈ ಹಿಂದೆ ಸಿಂಡಿಕೇಟ್ ನಲ್ಲಿ ನಿರ್ಣಯಿಸಿದಂತೆ ಆಡಳಿತ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ಹಾಗೂ ಚರ್ಚಿಸಿ ನಿರ್ಣಯ ಕೈಗೊಳ್ಳುವುದು. |
| **ನಿರ್ಣಯ:** | ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು. |
| | |
| ವಿಷಯ 4 : | RUSA ಅನುದಾನದಲ್ಲಿ ಪುರುಷರ ಹಾಗೂ ಮಹಿಳೆಯ ಹಾಸ್ಟೆಲ್ ಕಾಮಗಾರಿಗಾಗಿ ಮೀಸಲಿಟ್ಟ ಅನುದಾನವನ್ನು ಇಂಟರ್ ನ್ಯಾಷನಲ್ ಹಾಸ್ಟೆಲ್ ಗೆ ವರ್ಗಾಯಿಸಿದ ವಿಚಾರದ ಬಗ್ಗೆ ಇರುವ ಮಾಹಿತಿಯ ಬಗ್ಗೆ ಸರ್ಕಾರದ ನಿರ್ದೇಶನ ಮತ್ತು ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ಒದಗಿಸುವುದು ಮತ್ತು ನಿರ್ಣಯ ಕೈಗೊಳ್ಳುವುದು. |
| **ನಿರ್ಣಯ:** | ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು. |
| | |
| ಕಾರ್ಯಸೂಚಿ ಸಂಖ್ಯೆ: | ಸಿಬ್ಬಂದಿ:ಸಾ.ಸ.5:41(2025) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದ ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಲಿಗೆ ಪ್ರಭಾರ ನಿರ್ದೇಶಕರನ್ನು ಹಾಗೂ ಪ್ರಧಾನಮಂತ್ರಿ ಉಚ್ಚತರ್ ಶಿಕ್ಷಾ ಅಭಿಯಾನ್ (PM - USHA) ನ Institutional Co-ordinator ನ್ನು ನೇಮಕ ಮಾಡಿದ ಬಗ್ಗೆ. |
| **ನಿರ್ಣಯ:** | ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು. |
| | |
| ಕಾರ್ಯಸೂಚಿ ಸಂಖ್ಯೆ: | ಎಸಿಸಿ:ಸಾ.ಸ.5:42(2025) |
| ವಿಷಯ: | ಸ್ವಾಯತ್ತ ಕಾಲೇಜುಗಳ ವಾರ್ಷಿಕ ಪುನರ್ ಪರಿಶೀಲನೆ ಮತ್ತು ಮೌಲ್ಯಮಾಪನದ ಬಗ್ಗೆ. |
| **ನಿರ್ಣಯ:** | ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು. |
| | |
| ಕಾರ್ಯಸೂಚಿ ಸಂಖ್ಯೆ: | ಸಿಂಡಿಕೇಟು:ಸಾ.ಸ.5:43(2025) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರ ನೇಮಕಾತಿ ಬಗ್ಗೆ. |
| **ನಿರ್ಣಯ:** | ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಂಡಿಕೇಟು:ಸಾ.ಸ.5:44(2025) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕನ್ನಡ ಮತ್ತು ಅನ್ವಯಿಕ ಸಸ್ಯಶಾಸ್ತ್ರ ವಿಭಾಗಗಳಿಗೆ ಅಧ್ಯಕ್ಷರುಗಳನ್ನು ನೇಮಕಾತಿ ಮಾಡಿದ ಬಗ್ಗೆ. |
| **ನಿರ್ಣಯ:** | ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಡಿಇವಿ:ಸಾ.ಸ.5:45(2025) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯ ಮತ್ತು Malabar Cancer Centre (Post Graduate Institute of Oncology Sciences and Research), Govt of Kerala ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಯ ಅನುಮೋದನೆ ಬಗ್ಗೆ. |
| **ನಿರ್ಣಯ:** | ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಇಡಿ:ಸಾ.ಸ.5:46(2025) |
| ವಿಷಯ: | Annual Maintenance One year of Centralized AC System of Mangala Auditorium Building at Mangalore University Mangalagangothri – ಟೆಂಡರು ಅಂಗೀಕರಿಸುವ ಬಗ್ಗೆ. |
| **ನಿರ್ಣಯ:** | ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಇಡಿ:ಸಾ.ಸ.5:47(2025) |
| ವಿಷಯ: | ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿನ ವಾಣಿಜ್ಯ ಕಟ್ಟಡದ ತರಗತಿ ಕೊಠಡಿ ಸಂಖ್ಯೆ 116ನ್ನು ಕಂಪ್ಯೂಟರ್ ಲ್ಯಾಬ್ ಆಗಿ ಪರಿವರ್ತಿಸುವುದು ಮತ್ತು ಇದಕ್ಕೆ ಪೂರಕವಾದ ವಿದ್ಯುದ್ಧೀಕರಣದ ಕಾಮಗಾರಿ – Under RUSA Component – 9 of 2.0 – ಟೆಂಡರು ಅನುಮೋದನೆ ಬಗ್ಗೆ. |
| **ನಿರ್ಣಯ:** | ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಇಡಿ:ಸಾ.ಸ.5:48(2025) |
| ವಿಷಯ: | Providing 40 KLD Capacity STP (Sewage Treatment Plant) for boys hostels at Mangalore University Campus, Mangalagangothri – ಕಾಲಾವಧಿ ವಿಸ್ತರಣೆ ಬಗ್ಗೆ. |
| **ನಿರ್ಣಯ:** | ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು. |

ಕಾರ್ಯಸೂಚಿ ಸಂಖ್ಯೆ: ಇಡಿ:ಸಾ.ಸ.5:49(2025)

ವಿಷಯ: Provoiding 40 KLD Capacity STP (Sewage Treatment Plant) for boys Hostel at Mangalore University Campus Mangalagangothri – ಹೆಚ್ಚುವರಿ ಪರಿಮಾಣ ಮೊತ್ತ (Excess Qty. Work Slip) ಹಾಗೂ ಹೆಚ್ಚುವರಿ ಐಟಂ (EIRL) ಮತ್ತು ಉಳಿಕೆ ಮೊತ್ತಗಳಿಗೆ ಹಾಗೂ ಪರಿಷ್ಕೃತ ಅಂದಾಜುಪಟ್ಟಿಗೆ ಅನುಮೋದನೆ ನೀಡುವ ಬಗ್ಗೆ.

**ನಿರ್ಣಯ:** ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ:ಸಾ.ಸ.5:50(2025)

ವಿಷಯ: ಪ್ಯಾಕೇಜ್ ಟೆಂಡರ್ ಕಾಮಗಾರಿ

(1/4 1) – ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ಪ್ರಾಧ್ಯಾಪಕರ ವಸತಿಗೃಹ ಕಟ್ಟಡ ಸಂಖ್ಯೆ ಬಿ-4 ರ ಲೀಚ್ ಪಿಟ್‌ನ ವ್ಯವಸ್ಥೆ ಹಾಗೂ ಒಳಾಂಗೀಣ ನೀರು ಸರಬರಾಜು ಕೊಳವೆಯನ್ನು ಮರು ವ್ಯವಸ್ಥೆ ಮಾಡುವುದು.

(2/41) – ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ 'ಇ' ಮಾದರಿ ವಸತಿಗೃಹ ಸಂಖ್ಯೆ 1 ರ ಕುಸಿದಿರುವ ಲೀಚ್ ಪಿಟ್‌ನ ಮರು ವ್ಯವಸ್ಥೆ - ಕಾಮಗಾರಿಗಳ ಕಾಲಾವಧಿ ವಿಸ್ತರಣೆ ಬಗ್ಗೆ.

**ನಿರ್ಣಯ:** ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ:ಸಾ.ಸ.5:51(2025)

ವಿಷಯ: ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿನ ಆಡಳಿದ ಕಚೇರಿಯಲ್ಲಿ Cubical Partition ನಿರ್ಮಿಸುವುದು ಮತ್ತು Wooden Table ಮತ್ತು ಕುರ್ಚಿ ಹಾಗೂ ಸ್ಟೋರೇಜ್ ಬಾಕ್ಸ್‌ಗಳನ್ನು ಒದಗಿಸಿ ಅಳವಡಿಸುವ ಕಾಮಗಾರಿ ಮತ್ತು ಇದಕ್ಕೆ ಪೂರಕವಾದ ವಿದ್ಯುದ್ಧೀಕರಣ ಕಾಮಗಾರಿ – Under RUSA Component – 9 of 2.0 – ಟೆಂಡರು ಅಂಗೀಕರಿಸುವ ಬಗ್ಗೆ.

**ನಿರ್ಣಯ:** ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.5:52(2025)

ವಿಷಯ: ಶ್ರೀ ಸುರೇಶ್ ಕುಮಾರ್ ಬಿ. ನಾವೂರು, ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ - ಬಗ್ಗೆ.

ವಿಷಯ 1 : ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ಶಾಖೆಯಲ್ಲಿನ ಅತ್ಯಂತ ಸುಂದರವಾಗಿ ಮತ್ತು ಕಲಾತ್ಮಕವಾಗಿ ಕಂಗೊಳಿಸುತ್ತಿದ್ದ ಪ್ರವೇಶ ದ್ವಾರದ ಗಾಜಿನ ಬಾಗಿಲಿನ ವಿನ್ಯಾಸವನ್ನು ತೆಗೆದು ಹಾಕಿ ಕಬ್ಬಿಣದ ಸಲಾಕೆಗಳ ಗೇಟ್ ಗಳನ್ನು ಅಳವಡಿಸಿ ಪ್ರವೇಶ ದ್ವಾರವನ್ನು ಬದಲಾವಣೆ ಮಾಡಿರುವುದಕ್ಕೆ ಕಾರಣ ಮತ್ತು ಚರ್ಚೆ.

**ನಿರ್ಣಯ:** ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು.

ವಿಷಯ 2 : ವಿಶ್ವವಿದ್ಯಾನಿಲಯಕ್ಕೆ 2024 ಜನವರಿಯಿಂದ 2025 ಜುಲೈವರೆಗೆ ವಿವಿಧ ಯೋಜನೆಯಡಿಯಲ್ಲಿ ಬಂದಿರುವ ಒಟ್ಟು ಅನುದಾನಗಳು ಮತ್ತು ಕೈಗೊಂಡಿರುವ ಕಾಮಗಾರಿಗಳ ವಿವರಣೆ.

**ನಿರ್ಣಯ:** ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು.

ವಿಷಯ 3 : ವಿಶ್ವವಿದ್ಯಾನಿಲಯದಲ್ಲಿ ಪ್ರಗತಿಯಲ್ಲಿರುವ ಯಾವುದೇ ಕಾಮಗಾರಿಗಳು ಸಿಂಡಿಕೇಟ್ ಸದಸ್ಯರಿಂದ ವೀಕ್ಷಣೆಗೆ ಒಳಪಡುವಂತೆ ಮಾಡಲು ಈ ಬಗ್ಗೆ ಸಮಿತಿ ರಚನೆ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದು.

**ನಿರ್ಣಯ:** ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.5:53(2025)

ವಿಷಯ: ಶ್ರೀ ರಘುರಾಜ್ ಕೆ., ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ - ಬಗ್ಗೆ.

"ಶ್ರೀ ಉಮೇಶ್ಚಂದ್ರ, ಉಪನ್ಯಾಸಕರು, ಪತ್ರಿಕೋದ್ಯಮ ವಿಭಾಗ ಇವರಿಗೆ ಪದನ್ನೋತಿ ನೀಡದಿರುವ ಬಗ್ಗೆ ಸಮಗ್ರ ಮಾಹಿತಿಯನ್ನು ಒದಗಿಸುವುದು ಮತ್ತು ಇವರು ಈ ಹಿಂದೆ ನೀಡಲಾಗಿರುವ ಅರ್ಜಿ, ದಾಖಲೆಗಳು, ಅಡಕಗಳು, ಪುಸ್ತಕಗಳು ಕಾಣೆಯಾಗಿರುವ ಬಗ್ಗೆ ಅರ್ಜಿದಾರರಿಂದ ದೂರು ಬಂದಿದ್ದರೂ, ಆಡಳಿತ ವಿಭಾಗ ಕೈಗೊಂಡ ಕ್ರಮ ಮತ್ತು ಈವರೆಗೂ ಅವರಿಗೆ ಪದನ್ನೋತಿಗೆ ಅನರ್ಹಗೊಳಿಸಲು ಕಾರಣ ನೀಡುವುದು ಮತ್ತು ಅವರಿಗೆ ಪದೋನ್ನತಿ ನೀಡುವ ಬಗ್ಗೆ ಚರ್ಚಿಸಿ ಅಗತ್ಯ ಕ್ರಮಕೈಗೊಳ್ಳುವುದು".

**ನಿರ್ಣಯ:** ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು.

| | |
|---|---|
| ಕಾರ್ಯಸೂಚಿ ಸಂಖ್ಯೆ: | ಎಸಿಸಿ:ಸಾ.ಸ.5:54(2025) |
| ವಿಷಯ: | ಮಹಾತ್ಮ ಗಾಂಧಿ ಮೆಮೋರಿಯಲ್ ಕಾಲೇಜು, ಉಡುಪಿ ವಿದ್ಯಾಸಂಸ್ಥೆಗೆ ಸ್ವಾಯತ್ತ ಸ್ಥಾನಮಾನ ನೀಡುವ ಬಗ್ಗೆ. |
| **ನಿರ್ಣಯ:** | ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಎಸಿಸಿ:ಸಾ.ಸ.5:55(2025) |
| ವಿಷಯ: | ಗೌರವ ಡಾಕ್ಟರೇಟ್ ಪದವಿಗೆ ಅರ್ಜಿ ಆಹ್ವಾನಿಸುವ ಮತ್ತು ಅರ್ಜಿ ಶುಲ್ಕ ನಿಗದಿಪಡಿಸುವ ಬಗ್ಗೆ. |
| **ನಿರ್ಣಯ:** | ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಬ್ಬಂದಿ:ಸಾ.ಸ.5:56(2025) |
| ವಿಷಯ: | ಯುಜಿಸಿ ನಿಯಮಾವಳಿ 2018ರ ಪ್ರಕಾರ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂನಡಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗ / ಘಟಕ ಕಾಲೇಜುಗಳ ಬೋಧಕರಿಗೆ ವೃತ್ತಿ ಪದೋನ್ನತಿ - ಸ್ಕ್ರೀನಿಂಗ್ ಕಂ ಇವ್ಯಾಲ್ಯೂವೇಶನ್/ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸುವ ಬಗ್ಗೆ. |
| **ನಿರ್ಣಯ:** | ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಕಾನೂನು ಘಟಕ:ಸಾ.ಸ.5:57(2025) |
| ವಿಷಯ: | BSR Infratech India Ltd., ಸಂಸ್ಥೆ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ನಡುವಿನ ವಿವಾದದ ಬಗ್ಗೆ Arbitrator ರವರು ಮಾಡಿರುವ Award ನ್ನು ಪ್ರಶ್ನಿಸಿ Commercial Court, ಬೆಂಗಳೂರಿನಲ್ಲಿ ಹೂಡಿರುವ Appeal ನ್ನು ನಿರ್ವಹಿಸುತ್ತಿರುವ ನ್ಯಾಯವಾದಿ ಶ್ರೀ ರಾಜೇಂದ್ರ ಕುಮಾರ್ ಸುಂಗೆ ಇವರ ಅಂತಿಮ ಬಿಲ್ಲು ಪಾವತಿ ಬಗ್ಗೆ. |
| **ನಿರ್ಣಯ:** | ಅನುಮೋದಿಸಲಾಯಿತು. |

ಕಾರ್ಯಸೂಚಿ ಸಂಖ್ಯೆ: ಕಾನೂನು ಘಟಕ:ಸಾ.ಸ.5:58(2025)

ವಿಷಯ: BSR Infratech India Ltd. ಸಂಸ್ಥೆ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ನಡುವಿನ ವಿವಾದದ ಬಗ್ಗೆ Arbitrator ರವರು ಮಾಡಿರುವ Award ನ್ನು ಪ್ರಶ್ನಿಸಿ Commercial Court, ಬೆಂಗಳೂರಿನಲ್ಲಿ ಹೂಡಿರುವ ಅಪೀಲು ಆದೇಶವನ್ನು ಪ್ರಶ್ನಿಸಿ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ 2ನೇ ಮೇಲ್ಮನವಿ ಸಲ್ಲಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.5:59(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಕ್ರಿಶ್ಚಿಯಾನಿಟಿ ಪೀಠಕ್ಕೆ ಮುಖ್ಯಸ್ಥರನ್ನು ನೇಮಕ ಮಾಡುವ ಬಗ್ಗೆ.

**ನಿರ್ಣಯ:** ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.5:60(2025)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಕೊಂಕಣಿ ಅಧ್ಯಯನ ಪೀಠಕ್ಕೆ ಸಂಯೋಜಕರನ್ನು ನೇಮಕ ಮಾಡುವ ಬಗ್ಗೆ.

**ನಿರ್ಣಯ:** ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.5:61(2025)

ವಿಷಯ: ಶ್ರೀ ರಘುರಾಜ್ ಕೆ., ಸಿಂಡಿಕೇಟು ಸದಸ್ಯರು ಸಲ್ಲಿಸಿರುವ ಪ್ರಸ್ತಾವನೆ - ಬಗ್ಗೆ.

ವಿಷಯ 1 : ತುಳು ಭಾಷೆಯಲ್ಲಿ ಪಿಹೆಚ್.ಡಿ. ಮಾಡಲು ಆಸಕ್ತರಿರುವ ತುಳುವರಿಗೆ ಅವಕಾಶ ಮಾಡಿಕೊಡುವ ಉದ್ದೇಶದಿಂದ ಸಿಂಡಿಕೇಟ್ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ ನಿರ್ಣಯ ಕೈಗೊಳ್ಳುವುದು ಮತ್ತು ತೃತೀಯ ಲಿಂಗಿಗಳಿಗೆ ಪಿಹೆಚ್.ಡಿ. ಮಾಡಲು ಅವಕಾಶ ಒದಗಿಸಿ ಕೊಡಲು ಚರ್ಚಿಸಿ ನಿರ್ಣಯ ಕೈಗೊಳ್ಳುವುದು. ಪಿಹೆಚ್.ಡಿ. ಪದವಿ ಪಡೆಯಲು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಕೆಲವು ಕಾಲೇಜುಗಳ ಅರ್ಹ ಉಪನ್ಯಾಸಕರಿಗೆ ಪಿಹೆಚ್.ಡಿ. ಮಾರ್ಗದರ್ಶಕರಾಗಿ ನೇಮಕ ಮಾಡಲು ಕ್ರಮಕೈಗೊಳ್ಳಲು ನಿರ್ಣಯಿಸುವುದು.

**ನಿರ್ಣಯ:** ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು.

| | |
|---|---|
| ವಿಷಯ 2 : | ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಅಲ್ಪಸಂಖ್ಯಾತರ ಘಟಕ ಅಥವಾ ವಿಭಾಗವನ್ನು ಸ್ಥಾಪಿಸಿ, ಅಲ್ಪಸಂಖ್ಯಾತರ ಶೈಕ್ಷಣಿಕ ಪ್ರಗತಿಗಾಗಿ ಮಾಹಿತಿ ನೀಡಲು ಮತ್ತು ವಿದ್ಯಾರ್ಥಿ ವೇತನ ಹಾಗೂ ಇತರೆ ಸವಲತ್ತುಗಳ ಬಗ್ಗೆ ಅರಿವು ಮೂಡಿಸಲು ಒಂದು ವಿಭಾಗವನ್ನು ಸ್ಥಾಪಿಸಲು ಚರ್ಚಿಸಿ ನಿರ್ಣಯ ಕೈಗೊಳ್ಳುವುದು. |
| **ನಿರ್ಣಯ:** | ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಬ್ಬಂದಿ:ಸಾ.ಸ.5:62(2025) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದ ಬೋಧಕ ಸಿಬ್ಬಂದಿಗಳಿಗೆ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಅನುಮತಿ ನೀಡುವ ಬಗ್ಗೆ. |
| **ನಿರ್ಣಯ:** | ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಡಿಇವಿ:ಸಾ.ಸ.5:63(2025) |
| ವಿಷಯ: | 2025-26ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯ ಸ್ನಾತಕ (UG) ಕಾರ್ಯಕ್ರಮಗಳಿಗೆ ಅಗತ್ಯವಿರುವ ಅತಿಥಿ ಉಪನ್ಯಾಸಕರ ನೇಮಕಾತಿ ಬಗ್ಗೆ. |
| **ನಿರ್ಣಯ:** | ಅನುಮೋದಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಬ್ಬಂದಿ:ಸಾ.ಸ.5:64(2025) |
| ವಿಷಯ: | ಯುಜಿಸಿ ನಿಯಮಾವಳಿ 2018ರ ಪ್ರಕಾರ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂನಡಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳ ಬೋಧಕರಿಗೆ ವೃತ್ತಿ ಪದೋನ್ನತಿ - ಸ್ಕ್ರೀನಿಂಗ್ ಕಂ ಇವ್ಯಾಲ್ಯೂವೇಶನ್ / ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸುವ ಬಗ್ಗೆ. |
| **ನಿರ್ಣಯ:** | ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಬ್ಬಂದಿ:ಸಾ.ಸ.5:65(2025) |
| ವಿಷಯ: | ಡಾ.ಕಿಶೋರಿ ಪಿ. ನಾರಾಯಣ್‌ಕರ್, ಸಹಾಯಕ ಪ್ರಾಧ್ಯಾಪಕರು, ಗಣಿತಶಾಸ್ತ್ರ ವಿಭಾಗ ಇವರಿಗೆ ಸಹಾಯಕ ಪ್ರಾಧ್ಯಾಪಕ ಹಂತ 2ಗೆ ನೀಡಿರುವ ಪದೋನ್ನತಿ ದಿನಾಂಕವನ್ನು ಪರಿಷ್ಕರಿಸುವುದಕ್ಕೆ ಸಂಬಂಧಿಸಿ - ಸ್ಕ್ರೀನಿಂಗ್ ಕಂ ಇವ್ಯಾಲ್ಯೂವೇಶನ್ ಸಮಿತಿ ಸಭೆಯ ನಡವಳಿಯನ್ನು ಅನುಮೋದಿಸುವ ಬಗ್ಗೆ. |
| **ನಿರ್ಣಯ:** | ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಲು ನಿರ್ಣಯಿಸಲಾಯಿತು. |

**ಇತರೆ ವಿಷಯಗಳು:**

1) ಕೇಂದ್ರ ಸರ್ಕಾರದ ಕೌಶಲ್ಯಾಭಿವೃದ್ಧಿಯ ಬಗ್ಗೆ ಪಠ್ಯಕ್ರಮಗಳಲ್ಲಿ ಅಳವಡಿಸಿಕೊಂಡು Next Generation Programme ಗಳನ್ನಾಗಿಸುವ ನಿಟ್ಟಿನಲ್ಲಿ ಪಠ್ಯಕ್ರಮಗಳಲ್ಲಿ ಸೂಕ್ತ ಬದಲಾವಣೆ ತರುವ ಬಗ್ಗೆ ಎಲ್ಲಾ ಅಧ್ಯಯನ ಮಂಡಳಿಗಳಿಗೂ ಸೂಚನೆ ನೀಡುವ ಬಗ್ಗೆ ತಿಳಿಸಲಾಯಿತು.

2) ಮಂಗಳೂರು ವಿಶ್ವವಿದ್ಯಾನಿಲಯದ ವತಿಯಿಂದ ಮಡಿಕೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅತಿಥಿ ಉಪನ್ಯಾಸಕರು ಹಾಗೂ ತಾತ್ಕಾಲಿಕ ಬೋಧಕೇತರ ಸಿಬ್ಬಂದಿಗಳಿಗೆ ಬಾಕಿ ಇರುವ ಸಂಬಳವನ್ನು ತಕ್ಷಣ ಪಾವತಿ ಮಾಡಿ ಮಾಹಿತಿಯನ್ನು ಸಿಂಡಿಕೇಟು ಸದಸ್ಯರಾದ ಮಾನ್ಯ ಡಾ.ಕೆ.ಸಿ. ಮಹದೇಶ ಇವರಿಗೆ ನೀಡುವಂತೆ ಹಣಕಾಸು ಅಧಿಕಾರಿಯವರಿಗೆ ತಿಳಿಸಲಾಯಿತು.

3) ಕುದ್ಮುಲ್ ರಂಗರಾವ್ ಜಯಂತಿ ಆಚರಿಸುವ ಬಗ್ಗೆ ಈ ಹಿಂದೆ ಸಿಂಡಿಕೇಟ್ ಸಭೆಯಲ್ಲಿ ಸಲಹೆ ನೀಡಿದ್ದ ಶ್ರೀ ರಘುರಾಜ್ ರವರು ತಮ್ಮನ್ನು ವಿಶ್ವವಿದ್ಯಾನಿಲಯದಲ್ಲಿ ಹಮ್ಮಿಕೊಂಡಿದ್ದ ಕುದ್ಮುಲ್ ರಂಗರಾವ್ ಜಯಂತಿ ಕಾರ್ಯಕ್ರಮಕ್ಕೆ ಆಹ್ವಾನಿಸದಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರು. ಇನ್ನು ಮುಂದೆ ಈ ಬಗ್ಗೆ ಎಚ್ಚರವಹಿಸುವುದಾಗಿ ಸಭೆಗೆ ತಿಳಿಸಲಾಯಿತು.

4) ಪ್ರಾಂಶುಪಾಲರ ನೆಲೆಯಲ್ಲಿ ಸಿಂಡಿಕೇಟು ಸದಸ್ಯರನ್ನು ನೇಮಕ ಮಾಡದಿರುವ ಮಾನ್ಯ ಸಿಂಡಿಕೇಟು ಸದಸ್ಯರಾದ ಡಾ.ಕೆ.ಸಿ.ಮಹದೇಶ ಬಗ್ಗೆ ಪ್ರಸ್ತಾಪಿಸಿ, ಕೂಡಲೇ ಅರ್ಹ ಪ್ರಾಂಶುಪಾಲರುಗಳನ್ನು ಸಿಂಡಿಕೇಟು ಸದಸ್ಯರುಗಳನ್ನಾಗಿ ನೇಮಿಸುವಂತೆ ತಿಳಿಸಿದರು. ಈ ಬಗ್ಗೆ ಪ್ರಾಂಶುಪಾಲರ ಜೇಷ್ಠತಾ ಪಟ್ಟಿಯನ್ನು ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲಿರುವುದಾಗಿ ತಿಳಿಸಲಾಯಿತು.

5) ಬ್ರಹ್ಮಶ್ರೀ ನಾರಾಯಣಗುರು ಅಧ್ಯಯನ ಪೀಠದ ಕಟ್ಟಡ ನಿರ್ಮಾಣಕ್ಕೆ ಸರ್ಕಾರವು ನೀಡಲಿರುವ ಅನುದಾನಕ್ಕೆ ಅಂದಾಜು ಪಟ್ಟಿಯನ್ನು ಆದಷ್ಟು ಶೀಘ್ರವಾಗಿ ತಯಾರಿಸಿ ಸಲ್ಲಿಸಲು ಸಂಬಂಧಪಟ್ಟವರಿಗೆ ಸೂಚಿಸಲು ನಿರ್ಣಯಿಸಲಾಯಿತು.

6) ಮಾನ್ಯ ಸಿಂಡಿಕೇಟು ಸದಸ್ಯರಾದ ಡಾ.ಕೆ.ಸಿ.ಮಹದೇಶ ಮತ್ತು ಡಾ.ಎಸ್.ಬಿ.ಎಂ. ಪ್ರಸನ್ನ ಇವರ ಸಲಹೆ ಮೇರೆಗೆ ವಿಶ್ವವಿದ್ಯಾನಿಲಯ ಆರಂಭದಿಂದ ಇಲ್ಲಿಯವರೆಗೆ ಮಂಗಳೂರು ವಿಶ್ವವಿದ್ಯಾನಿಲಯವು ಪ್ರದಾನ ಮಾಡಿರುವ ಗೌರವ ಡಾಕ್ಟರೇಟ್, ಡಿ.ಎಸ್ಸಿ. ಮತ್ತು ಡಿ.ಲಿಟ್. ಪದವಿ ಪಡೆದವರ ವಿವರಗಳನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಮತ್ತು ವಿಶ್ವವಿದ್ಯಾನಿಲಯದ ಕಟ್ಟಡದ ಸೂಕ್ತ ಪ್ರದೇಶದಲ್ಲಿ ಪ್ರಕಟಿಸಲು ನಿರ್ಣಯಿಸಲಾಯಿತು.

7) ಈ ಹಿಂದೆ ನಿರ್ಣಯ ಕೈಗೊಂಡಂತೆ ಸರ್ಕಾರದಿಂದ ಅನುದಾನ ಪಡೆಯುವ ನಿಟ್ಟಿನಲ್ಲಿ ಉಸ್ತುವಾರಿ ಸಚಿವರು, ಜನಪ್ರತಿನಿಧಿಗಳ ಹಾಗೂ ಸಿಂಡಿಕೇಟು ಸದಸ್ಯರನ್ನೊಳಗೊಂಡ ಸಭೆಯನ್ನು ಶೀಘ್ರದಲ್ಲಿ ಆಯೋಜಿಸುವುದಾಗಿ ಸಭೆಗೆ ತಿಳಿಸಲಾಯಿತು.

8) ಸಿಂಡಿಕೇಟು ಸದಸ್ಯರುಗಳಾದ ಡಾ.ಎಸ್.ಬಿ.ಎಂ. ಪ್ರಸನ್ನ ಮತ್ತು ಡಾ.ಕೆ.ಸಿ.ಮಹದೇಶ ಇವರ ಕೋರಿಕೆ ಮೇರೆಗೆ, ಮುಂದಿನ ದಿನಗಳಲ್ಲಿ ಬ್ರಿಟಿಷ್ ಕೌನ್ಸಿಲ್ ನಿಂದ ಆಮಂತ್ರಣ ಬಂದಲ್ಲಿ ಮಾನ್ಯ ಸಿಂಡಿಕೇಟು ಸದಸ್ಯರುಗಳನ್ನು ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊರೆ ಇಲ್ಲದೆ ಅನುಮತಿ ನೀಡಲು ನಿರ್ಣಯಿಸಲಾಯಿತು.

9) ಇಂಜಿನಿಯರಿಂಗ್ ವಿಭಾಗದ ತಾಂತ್ರಿಕ ಸಿಬ್ಬಂದಿಗಳ ಮಾಸಿಕ ಕಾರ್ಯ ಚಟುವಟಿಕೆಗಳ ವಿವರಗಳನ್ನು ಸಿಂಡಿಕೇಟು ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

10) ವಿಶ್ವವಿದ್ಯಾನಿಲಯದಲ್ಲಿ ಇಂಟರ್‌ನೆಟ್ ಸೇವೆಯು ಆಗಾಗ ಕಡಿತಗೊಳ್ಳುತ್ತಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ ಮಾನ್ಯ ಸಿಂಡಿಕೇಟು ಸದಸ್ಯರಾದ ಡಾ.ಕೆ.ಸಿ. ಮಹದೇಶ ಇವರ ಸಲಹೆ ಮೇರೆಗೆ ಇಂಟರ್‌ನೆಟ್ ಸೇವೆ ಒದಗಿಸುತ್ತಿರುವ ಸಂಸ್ಥೆಗೆ ಈ ಬಗ್ಗೆ ನೋಟೀಸು ನೀಡಲು ನಿರ್ಣಯಿಸಲಾಯಿತು.

11) ಕುದ್ಮುಲ್ ರಂಗರಾವ್ ಜೀವನ ಚರಿತ್ರೆ ಕುರಿತ ಪುಸ್ತಕಗಳನ್ನು ವಿಶ್ವವಿದ್ಯಾನಿಲಯ ಗ್ರಂಥಾಲಯಕ್ಕೆ ಖರೀದಿಸುವ ನಿಟ್ಟಿನಲ್ಲಿ ಪುಸ್ತಕಗಳ ವಿವರಗಳ ಕುರಿತು ಮಾನ್ಯ ಸಿಂಡಿಕೇಟು ಸದಸ್ಯರಾದ ಶ್ರೀ ರಘುರಾಜ್ ಇವರ ಸಲಹೆಯನ್ನು ಪಡೆಯಲು ನಿರ್ಣಯಿಸಲಾಯಿತು.

12) ವಿಶ್ವವಿದ್ಯಾನಿಲಯದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ನಿಯಂತ್ರಿಸುವ ಪರಿನಿಯಮದಲ್ಲಿ ಉಪ ಕುಲಸಚಿವರ ಹುದ್ದೆಯ ಪದೋನ್ನತಿಗೆ ಸಂಬಂಧಿಸಿ ಅನುಮೋದಿಸಲಾದ ಕರಡು ಪರಿನಿಯಮದಲ್ಲಿ ವಿಶ್ವವಿದ್ಯಾನಿಲಯದ ಸಹಾಯಕ ಕುಲಸಚಿವರ ಹುದ್ದೆಯಲ್ಲಿ ಕನಿಷ್ಠ ಐದು ವರ್ಷ ಸೇವೆಯ ಬದಲು ಕನಿಷ್ಠ ಸೇವಾವಧಿಯನ್ನು ಮೂರು ವರ್ಷಕ್ಕೆ ಸೀಮಿತಗೊಳಿಸಿ ತಿದ್ದುಪಡಿ ಮಾಡಿ ಸರ್ಕಾರಕ್ಕೆ ಸಲ್ಲಿಸಲು ನಿರ್ಣಯಿಸಲಾಯಿತು.

**ಕುಲಸಚಿವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.**

| | |
|---|---|
| ಸಹಿ/- | ಸಹಿ/- |
| **ಕುಲಸಚಿವರು** | **ಕುಲಪತಿಯವರು** |